
# Community Health Learning Programme 2009

CHLP-2009-1 PR35




Source: Community Health Cell

# A Report on the Community Health Learning Experience

Prabha N.

COMMUNITY HEALTH CELL

Sudha
WR S2b (84)

CHLP-2009.1/FR36

Community Health Learning Programme

May 2009 to July 2009

# REPORT

N.Prabha
Intern,Community Health Cell

*'I believed that health was the absence of illness before I met organisations working on health rights'*

## 1. Introduction

My keenness to be part of the efforts to transform society into a healthy one attracted me to Janaarogya Aandolana – Karnataka. Through JAAK, I learnt the true meaning of health, health rights, health and its connection through various communities, common agenda amongst various organisations working on health issues, etc. I also got an opportunity to participate as an intern in the Community Health Learning Programme. On 11.05.2009, I joined as an intern of the CHLP programme. My learning was through two processes : classroom teaching and practical (field) based learning

## 2. Learning Objectives

After the 4 weeks of CHLP orientation, an action plan was devised for the following three months; the highlight of the plan was as follows :

1. Strengthening Janaarogya Aandolana - Karnataka
2. Working towards ensuring the rights of womens especially health rights
3. Collaborating with organisations working for dalit and weaker sections of society for improving their health situation.

## 3. Orientation on community health:

The orientation program on community health covered the following aspects, which benefited me to improve my understanding both theoretically and in practice-

- Private property, gender, caste : Caste, gender, religious discrimination and those related to property, and the effect it has on the health of society.
- Public Health System : With an intention to improve the health situation, to bring about coordination amongst various Government departments, supply of medicines and issues related to medicines, improving the public health system, and so on.
- Discussions with the chief functionaries of BASIC Needs, an organisation working with differently abled communities and people suffering mental problems to find out ways and means in which they could get involved with Janaarogya Aandolana – Karnataka.
- NRHM : Background, objectives, action plan, community monitoring programme under NRHM, etc.
- Globalization : globalization, privatization, liberalization processes

Gender and health and issues related to this.

Through classroom sessions and practical experience gained through field visits and having gained an insight into community health issues, I decided to work on 'Health Rights'.

## 4. Activities during internship

### 4.1 Trainings :

During the months of May, June and July 2009, different activities were undertaken as a part of my internship with various small groups and NGOs. There were trainings conducted on different

aspects of gender discrimination, male domination and those related to property rights, and the effect it has on the health of society. The methodology used was through lectures, discussions, role play etc.

On the subject of Public Health System an introduction to health services available right from the village level to the state level, state of the public health system at the state and national levels etc was discussed. The methodology used included Lectures, discussions, use of pictures, experience sharing etc. Regarding National Rural Health Mission (NRHM) trainings were carried out emphasizing on Background, objectives, action plan, community monitoring programme under NRHM, study of documentation of health denials.
On the issue of globalization, aspects like privatization, liberalization processes, rules governing patenting and a discussion on the effects of globalization on the country's financial, social, political, cultural, educational and health aspects were discussed. Training on Gender and health was also conducted where discriminatory practices vis-à-vis women, right to property, lack of educational and employment opportunities, social and familial pressures, mental and physical torture, lack of adequate representation politically and socially were the issues discussed.

## 4.2 Janarogya Andolana Karnataka

Discussions with the chief functionaries of BASIX Needs, an organisation working with differently abled communities and people suffering mental problems was carried out to find out ways and means in which they could get involved with Janaarogya Aandolana – Karnataka. Groundwork for the publication of the JAA-K newsletter was done through discussions with the concerned staff, sending requests for submission of articles to be published to chief functionaries of women oriented organizations etc. Held discussion with programme coordinator of Suvarna TV and gave inputs regarding the programme called 'Katheyalla Jeevana' being telecast on Suvarna channel. Further made several visits to meet the health secretary at Vikasa Soudha ; Gave a statement to the team who were investigating the irregularities at the K.R.Puram General Hospital. Having noticed the disparities in the recorded statement, met the Vigilance Officer at the Health Department, Ananda Rao Circle and gave the correct statement. Met leaders of womens' organizations and self-help group representatives connected to Devanahalli; informed them about decisions taken at the State Committee. Discussed local health issues with them

## 4.3 Visits to health Centres

As a part of my work I also visited several health centres and hospitals, especially one in regards to the chikkungunya-affected areas. In the backdrop of complaints against the Kanasavaadi PHC, visited the PHC, along with GP members and JAAK workers and discussed issues with the PHC staff. Went to meet the Vigilance Force officials and discuss issues related to Bangalore Rural, Doddaballapur's Kanasavaadi PHC and complaints related to it.

## 4.4 Other activites

- To deliver a letter to the President of the Law Services Authority regarding the Right to Food campaign at Raichur district.

DGP's office : To solicit protection for a Dalit youth who was a victim of an acid attack.

## ಸಮುದಾಯ ಆರೋಗ್ಯ ಕಲಿಕಾ ಕಾರ್ಯಕ್ರಮ. (ಸಿ.ಹೆಚ್.ಎಲ್.ಪಿ)

### ಪರಿಚಯ :

ಕಳೆದ ಹತ್ತಾರು ವರ್ಷಗಳಿಂದ ಜನಪರ ಸಂಘಟನೆಗಳ ಸಂಪರ್ಕದಲ್ಲಿದ್ದು ಜನಸಮುದಾಯದ ಜೊತೆ ಕೆಲಸ ಮಾಡುತ್ತಿರುವ ನನಗೆ ಆರಾಮದಾಯಕ, ಸಂತೋಷದಾಯಕ ಬದುಕಿನ ಗುಟ್ಟು ಆರೋಗ್ಯದಲ್ಲಿ ಅಡಗಿದೆ ಎಂಬ ಸತ್ಯ ಮನದಟ್ಟಾಯಿತು. ಇದೇನು ಜನಸಾಮಾನ್ಯರಿಗೆ ತಿಳಿಯದ ರಹಸ್ಯವೇನು ಅಲ್ಲ. 'ಆರೋಗ್ಯವೇ ಭಾಗ್ಯ' ಎನ್ನುವ ನಾಣ್ಣುಡಿ ತಲೆಮಾರುಗಳಿಂದ ತಲೆಮಾರಿಗೆ ರವಾನೆಯಾಗುತ್ತಿರುವ ಸತ್ಯ ಸಂದೇಶ ತಾನೆ. ಆದರೆ ಚಳುವಳಿಗಳ ಮೂಲಕ ನಾನು ಆರೋಗ್ಯದ ವಿವಿಧ ಆಯಾಮಗಳ ಕುರಿತು ತಿಳಿದುಕೊಳ್ಳಲು ಸಾಧ್ಯವಾಯಿತು. ಅದೇನೆಂದರೆ ಸಂಘಟನೆಗಳ ಸಂಪರ್ಕಕ್ಕೆ ಬರುವ ಮುಂಚೆ ಅರೋಗ್ಯವೆಂದರೆ ರೋಗಗಳ ಅನುಪಸ್ಥಿತಿ ಎನ್ನುವ ಧೃಡವಾದ ನಂಬಿಕೆ ನನ್ನಲ್ಲಿತ್ತು. ಇನ್ನು ಸ್ಪಷ್ಟವಾಗಿ ಹೇಳಬೇಕೆಂದರೆ ಆರೋಗ್ಯವು ವೈದ್ಯರ ಕೈಯಲ್ಲಿರುವ ಸಂಗತಿ ಎಂಬ ಭಾವನೆ ಇತ್ತು. ಸಂಘಟನೆಗಳ ಸಹವಾಸವು ಈ ತಪ್ಪು ಕಲ್ಪನೆಯನ್ನು ದೂರ ಮಾಡಿ ಆರೋಗ್ಯದ ನಿಜವಾದ ಕಲ್ಪನೆಯನ್ನು ಮೂಡಿಸಿದವು. ನಿಜವಾದ ಆರೋಗ್ಯವು ಬದುಕಿನ ಹಲವಾರು ನಿರ್ಧಾರಕಗಳನ್ನು ಒಳಗೊಂಡಿರುವ ಮಾಹಿತಿಯನ್ನು ಸಂಘಟನೆಗಳು ನೀಡಿದವು.

ಆರೋಗ್ಯಪೂರ್ಣ ಬದುಕಿಗೆ ಪೌಷ್ಟಿಕ ಆಹಾರ, ಶುದ್ಧವಾದ ಕುಡಿಯುವ ನೀರು, ವಾಸಿಸಲು ಯೋಗ್ಯವಾದ ಪರಿಸರ, ಉತ್ತಮವಾದ ಶಿಕ್ಷಣ, ಆಸಕ್ತಿಗೆ ತಕ್ಕ ಉದ್ಯೋಗ, ನೆಮ್ಮದಿ ತುಂಬಿದ ಸಾಮಾಜಿಕ ವಾತಾವರಣ, ತನ್ನ ನಂಬಿಕೆಗಳನ್ನು ಆಚರಿಸಲು ಬೇಕಾದ ಸೌಹಾರ್ದ ಸಾಂಸ್ಕೃತಿಕ ವಾತಾವರಣ, ವೈಯಕ್ತಿಕ ಸ್ವಾತಂತ್ರ್ಯ, ಸಂಪನ್ಮೂಲಗಳ ಹಂಚಿಕೆಯಲ್ಲಿ ಸಾಮಾಜಿಕ ನ್ಯಾಯ, ಸಮತೆಯ ತತ್ವ, ರಾಜಕೀಯ ಅವಕಾಶ, ಸಮಾನ ನಾಗರೀಕತೆಯ ತತ್ವ ಇವೆಲ್ಲವು ಆರೋಗ್ಯವನ್ನು ಆವರಿಸಿರುವ ನಿರ್ಧಾರಕಗಳು ಇವುಗಳು ಎಲ್ಲರನ್ನು ತಲುಪಿದಾಗ ಮಾತ್ರ ಆರೋಗ್ಯ ಎನ್ನುವ ಆರೋಗ್ಯದ ಸಮಗ್ರ ಕಲ್ಪನೆ ಮೂಡಿದ್ದು ಚಳುವಳಿಗಳ ಮೂಲಕ.

ಹೀಗಾಗಿ ಆರೋಗ್ಯಕ್ಕಾಗಿ ಕೆಲಸ ಮಾಡುವುದು ಎಂದರೆ ರೋಗಗ್ರಸ್ಥ ಸಮಾಜವನ್ನು ಆರೋಗ್ಯವಂತ ಸಮಾಜವನ್ನಾಗಿ ಮಾರ್ಪಡಿಸುವ ಗುರುತರವಾದ ಕೆಲಸ ಎಂಬ ಅಭಿಪ್ರಾಯ ನನ್ನಲ್ಲಿ ಮೂಡಿತು. ಈ ಕೆಲಸಕ್ಕಾಗಿ ಹೆಚ್ಚಿನ ಸಮಯವನ್ನು ಶ್ರಮವನ್ನು ವಿನಿಯೋಗಿಸಲು ನನ್ನಲ್ಲಿ ಉಂಟಾದ ಆಸಕ್ತಿಯು ಜನಾರೋಗ್ಯ ಆಂದೋಲನ ಕರ್ನಾಟಕದ ಕಡೆಗೆ ನನ್ನನ್ನು ಆಕರ್ಷಿಸಿತು. ಈ ಸಂಪರ್ಕದ ಮೂಲಕ ಆರೋಗ್ಯ, ಅರೋಗ್ಯದ ಹಕ್ಕು, ಅರೋಗ್ಯ ಮತ್ತು ವಿವಿಧ ಜನಸಮುದಾಯಗಳು, ಆರೋಗ್ಯಕ್ಕಾಗಿ ವಿವಿಧ ಸಂಘಟನೆಗಳ ನಡುವಿನ ಸಮಾನ ಕಾರ್ಯಸೂಚಿಗಳು ಮುಂತಾದ ವಿಷಯಗಳಲ್ಲಿ ಮತ್ತಷ್ಟು ತಿಳುವಳಿಕೆ ಪಡೆಯಲು ಸಾಧ್ಯವಾಯಿತು.

ಇದೇ ತಿಳುವಳಿಕೆಯನ್ನು ಮತ್ತಷ್ಟು ವಿಶಾಲಗೊಳಿಸಿಕೊಳ್ಳಲು ಹಾಗು ಹೆಚ್ಚಿನ ಸಮಯವನ್ನು ಜನಾರೋಗ್ಯಕ್ಕಾಗಿ ಮೀಸಲಿಟ್ಟು ಕೆಲಸ ಮಾಡಲು ಬೇಕಾದ ಕಣ್ಣೋಟ, ನಿರ್ದಿಷ್ಟ ಕಾರ್ಯಸೂಚಿಯನ್ನು ಸ್ಪಷ್ಟಪಡಿಸಿಕೊಳ್ಳುವ ಅವಕಾಶಕ್ಕಾಗಿ **ಸಮುದಾಯ ಆರೋಗ್ಯ ಕಲಿಕಾ ಕಾರ್ಯಕ್ರಮದ** ಕಲಿಕಾರ್ಥಿಯಾಗಿ ಪಾಲ್ಗೊಳ್ಳುವ ಅವಕಾಶ ದೊರೆಯಿತು. ಈ ಕುರಿತ ಸಂಕ್ಷಿಪ್ತ ರೂಪದ ಟಿಪ್ಪಣಿಯನ್ನು ನಮೂದಿಸಲಾಗುತ್ತಿದೆ.

ದಿನಾಂಕ 11.05.09 ರಿಂದ ಫೆಲೊ ಆಗಿ ಸೇರ್ಪಡೆಗೊಂಡ ನಾನು ಈ ತನಕ ಎರಡು ರೀತಿಯ ಪ್ರಕ್ರಿಯೆಗಳ ಮೂಲಕ ವಿಷಯಗಳನ್ನು ಅರಿಯಲು ಪ್ರಯತ್ನಿಸಿರುತ್ತೇನೆ. ಒಂದನೆಯದು ವಿಷಯ ಮಂಡನೆ (ತರಗತಿ) ಮೂಲಕ ಅಥವಾ ಸಂಪನ್ಮೂಲ ವ್ಯಕ್ತಿಗಳು ಸಾದರಪಡಿಸಿದ ಪಾಠ ಪ್ರವಚನ ಚರ್ಚೆ ಪ್ರಶ್ನೋತ್ತರಗಳ ಮೂಲಕ. ಎರಡನೆಯದು ಪ್ರಾಯೋಗಿಕ (ಕ್ಷೇತ್ರ) ಕಲಿಕೆಯ ಮೂಲಕ.

## Orientation

1. **ಖಾಸಗಿ ಆಸ್ತಿ, ಲಿಂಗತ್ವ, ಜಾತಿ :** ಭಾರತೀಯ ಸಮಾಜದಲ್ಲಿ ಖಾಸಗಿ ಆಸ್ತಿಯ ಒಡೆತನದೊಂದಿಗೆ ಉಗಮವಾದ ಲಿಂಗ ತಾರತಮ್ಯ, ಪುರುಷಾಧಿಪತ್ಯಕ್ಕೆ ಜಾರುತ್ತಾ ಬಂದ ಮಹಿಳೆ, ಆಸ್ತಿ ಹಕ್ಕಿನಿಂದ ವಂಚಿತಳಾದ ಬಗೆ, ಮನುವಿನ ಸಿದ್ಧಾಂತ, ಜಾತಿಗಳ ನಡುವೆ ಇರುವ ತಾರತಮ್ಯ, ಅದರಲ್ಲು ದಲಿತ ಮಹಿಳೆಯರ ಆರೋಗ್ಯ ಪರಿಸ್ಥಿತಿ, ಜಾತಿ, ಲಿಂಗ,ಧಾರ್ಮಿಕ,ಆಸ್ಥಿ ತಾರತಮ್ಯಗಳಿಂದಾಗಿ ಆರೋಗ್ಯದ ಮೇಲೆ ಉಂಟಾಗುತ್ತಿರುವ ಪರಿಣಾಮಗಳು.

2. **ಸಾರ್ವಜನಿಕ ಆರೋಗ್ಯ ವ್ಯವಸ್ಥೆ :** ಗ್ರಾಮ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದವರೆಗೆ ಲಭ್ಯವಿರುವ ಆರೋಗ್ಯ ಸೇವೆಗಳ ಪರಿಚಯ ಹಾಗು ರಾಷ್ಟ್ರೀಯ ಜವಬ್ದಾರಿಗಳು, ಕಾಲಕ್ರಮೇಣ ಕ್ಷೀಣವಾಗುತ್ತಿರುವ ಸಾರ್ವಜನಿಕ ಆರೋಗ್ಯ ಸೇವೆಗಳು, ಸರ್ಕಾರದ ಬಜೆಟ್‌ನಲ್ಲಿ ಕಡಿತವಾಗುತ್ತಿರುವ ಅನುದಾನ. ಆರೋಗ್ಯ ಸುಧಾರಣೆಯ ಸಲುವಾಗಿ ವಿವಿಧ ಇಲಾಖೆಗಳ ನಡುವೆ ಅಗತ್ಯವಾಗಿ ತರಬೇಕಿರುವ ಸಮನ್ವಯತೆ. ಔಷಧಿಗಳ ಪೂರೈಕೆ, ಔಷಧಿ ಕ್ಷೇತ್ರ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ಸಮುದಾಯಗಳ ಪಾತ್ರ ಇತ್ಯಾದಿ

3. **ಮಾನಸಿಕ ಆರೋಗ್ಯ ಮತ್ತು ವಿಕಲಾಂಗ ಸಮುದಾಯದೊಂದಿಗೆ ಕೆಲಸ ಮಾಡುವ ಬೇಸಿಕ್ ನೀಡ್ಸ್ ಎನ್ನುವ ಸಂಸ್ಥೆಯ ಮುಖ್ಯಸ್ಥರೊಂದಿಗೆ ಸಭೆ :** ಸಂಸ್ಥೆಯ ಸದಸ್ಯರಿಗೆ ಜನಾರೋಗ್ಯ ಆಂದೋಲನ ಕರ್ನಾಟಕದ ಹಾಗು ಈ ತನಕ ಆಂದೋಲನವು ಮುನ್ನಡೆಸಿರುವ ಕಾರ್ಯಕ್ರಮ ಹೋರಾಟಗಳ ಪರಿಚಯ ಮಾಡಲಾಯಿತು. ಸಮುದಾಯ ಮೇಲ್ವಿಚಾರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಾರೋಗ್ಯ ಅಂದೋಲನದ ಕಾರ್ಯಕರ್ತರಿಂದ ಅವರ ಅನುಭವಗಳ ವಿನಿಮಯ. ಜನಾರೋಗ್ಯ ಆಂದೋಲನ ಕರ್ನಾಟಕದ ಭಾಗವಾಗಿ ಬೇಸಿಕ್ ನೀಡ್ಸ್ ಸಂಸ್ಥೆಯು ಹೇಗೆ ತೊಡಗಿಸಿಕೊಳ್ಳಬಹುದೆಂಬ ಕುರಿತು ಚರ್ಚೆ.

4. **ಎನ್.ಆರ್.ಹೆಚ್.ಎಮ್ :** ಎನ್.ಆರ್.ಹೆಚ್.ಎಮ್ ಕಾರ್ಯಕ್ರಮ ಜಾರಿಯಾದ ಹಿನ್ನೆಲೆ, ಅದರ ಗುರಿ ಉದ್ದೇಶಗಳು, ಕಾರ್ಯತಂತ್ರ, ಎನ್.ಆರ್.ಹೆಚ್.ಎಮ್ ಅಡಿಯಲ್ಲಿ ಸಮುದಾಯ ಮೇಲ್ವಿಚಾರಣೆ ಕಾರ್ಯಕ್ರಮ, ಪ್ರಾಯೋಗಿಕವಾಗಿ 9 ರಾಜ್ಯಗಳಲ್ಲಿ ಅನುಷ್ಠಾನ ಆದ ಬಗ್ಗೆ ಆಶಾ ಚಟುವಟಿಕೆ, ಅಯುಶ್ ಕಾರ್ಯಕ್ರಮ, ಕರ್ನಾಟಕದಲ್ಲಿ ಜನಾರೋಗ್ಯ ಆಂದೋಲನ ಕರ್ನಾಟಕದ ವತಿಯಿಂದ ದಾಖಲಿಸಲಾಗಿದ್ದ ವಿವಿಧ ಪ್ರಕಾರದ ಆರೋಗ್ಯ ನಿರಾಕರಣೆಯ ದಾಖಲಾತಿ ಅಧ್ಯಯನ.

5. **ಜಾಗತೀಕರಣ :** ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಪ್ರಕ್ರಿಯೆಗಳು. ಪೇಟೆಂಟ್ ನೀತಿ ಅದರಲ್ಲು ಔಷಧಿ ಮತ್ತು ಕೃಷಿ ಉತ್ಪನ್ನಗಳ ಒಳಗೊಂಡು. ಜಾಗತೀಕರಣದ ಪ್ರಕ್ರಿಯಾತ್ಮಕ ಮತ್ತು ಭೌದ್ಧಿಕ ವಿಧಾನಗಳು. ಇದರ ಭಾಗವಾಗಿ ಸಂರಚನಾ ಹೊಂದಾಣಿಕೆಯ ಕಾರ್ಯಸೂಚಿ. ಭಾರತದಲ್ಲಿ ಇದರ ಪ್ರಾರಂಭ ಮತ್ತು ಈವರೆಗಿನ ಲಾಭ–ನಷ್ಟಗಳು. ವಿಶೇಷ ಆರ್ಥಿಕ ವಲಯಗಳ ಜಾರಿ ಮತ್ತು ರೈತರ ಮೇಲಾದ ಪರಿಣಾಮಗಳು, ಆರೋಗ್ಯದ ಮೇಲೆ ಉದಾರೀಕರಣದ ಪ್ರಭಾವ. ವಿಶ್ವ ಬ್ಯಾಂಕ್ ಪ್ರೇರೇಪಿತ ಆರ್ಥಿಕ ಕಾರ್ಯಕ್ರಮಗಳು. ಒಟ್ಟಾರೆ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ರಂಗಗಳ ಮೇಲೆ ಜಾಗತೀಕರಣದ ಪರಿಣಾಮ ಅಥವಾ ದಾಳಿಯ ವಿಶ್ಲೇಷಣೆ.

6. **ಲಿಂಗ ಮತ್ತು ಆರೋಗ್ಯ :** ಮಹಿಳೆಯನ್ನಾವರಿಸಿರುವ ತಾರತಮ್ಯ ಧೋರಣೆಗಳು, ಆಸ್ತಿಹಕ್ಕು, ಜನನ ಸ್ವಾತಂತ್ರ್ಯ, ಶೈಕ್ಷಣಿಕ ಔದ್ಯೋಗಿಕ ಅವಕಾಶಗಳಲ್ಲಿ ವಂಚನೆ, ಕೌಟುಂಬಿಕ ಸಾಮಾಜಿಕ ಒತ್ತಡಗಳು, ಕೆಲಸದ ಹೊರೆ, ಮಾನಸಿಕ ಮತ್ತು ಶಾರೀರಿಕ ದೌರ್ಜನ್ಯಗಳು, ಸಾಮಾಜಿಕವಾಗಿಯು ರಾಜಕೀಯವಾಗಿಯು ಇಲ್ಲವಾಗಿರುವ ಪ್ರಾಧಾನ್ಯತೆ. ಆರ್ಥಿಕ ಸ್ವಾತಂತ್ರ್ಯದ ಕೊರತೆ, ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುವ ಆರೋಗ್ಯ ಸಮಸ್ಯೆಗಳು, ಹೆಚ್.ಐ.ವಿ ಭಾದಿತ ಮಹಿಳೆಯರ ಸಂಕಷ್ಟಗಳು, ಸರ್ಕಾರದ ನೀತಿ ನಿರೂಪಣೆಗಳಲ್ಲು ಎದ್ದು ಕಾಣುವ ತಾರತಮ್ಯ ಧೋರಣೆಗಳು ಇತ್ಯಾದಿ. ಮೇಲೆ ನಮೂದಿಸಿರುವಂತೆ ತರಗತಿಯ ಮೂಲಕ ಹಾಗು ಕ್ಷೇತ್ರ ಭೇಟಿ – ಪ್ರಾಯೋಗಿಕ ಅನುಭವದ ಮೂಲಕ ಆರೋಗ್ಯದ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿರುವ ನನಗೆ ಮುಂದಿನ ದಿನಗಳಲ್ಲಿ ಕಾರ್ಯಕ್ಷೇತ್ರವನ್ನು ನಿರ್ಧಿಷ್ಟಪಡಿಸಿಕೊಳ್ಳುವ ಕಣ್ನೋಟ ಕಾಣಸಿಕ್ಕಿದ್ದು ನನ್ನ ಆಯ್ಕೆಯು **ಆರೋಗ್ಯದ ಹಕ್ಕಿಗಾಗಿ** ಕೆಲಸ ಮಾಡುವುದಾಗಿದೆ.

## ಕಲಿಕಾ ಉದ್ದೇಶಗಳು

4 ವಾರಗಳ ಸಿ.ಹೆಚ್.ಎಲ್.ಪಿ ಯ ಕಲಿಕೆಯ ನಂತರ ಮುಂದಿನ 3 ತಿಂಗಳಿಗೆ ರೂಪಿಸಿಕೊಂಡ ಕ್ರಿಯಾ ಯೋಜನೆ.

1. **ಕರ್ನಾಟಕದಲ್ಲಿ ಜನಾರೋಗ್ಯ ಆಂದೋಲನವನ್ನು ಬಲಪಡಿಸುವುದು**
2. **ಮಹಿಳೆಯರ ಆರೋಗ್ಯದ ಹಕ್ಕಿಗಾಗಿ ಕೆಲಸ ಮಾಡುವುದು**
3. **ದಲಿತ ಹಾಗು ದುರ್ಬಲ ಸಮುದಾಯದ ಆರೋಗ್ಯ ಸುಧಾರಣೆಯ ಚಟುವಟಿಕೆಗಳಿಗೆ ಕೈ ಜೋಡಿಸುವುದು.**

### 1. ಕರ್ನಾಟಕದಲ್ಲಿ ಜನಾರೋಗ್ಯ ಆಂದೋಲನವನ್ನು ಬಲಪಡಿಸುವುದು.

- ಜನಾರೋಗ್ಯ ಆಂದೋಲನದ ಜಾಲವನ್ನು ಬಲಪಡಿಸಲು ನಿರ್ಧಿಷ್ಟವಾಗಿ 3 ಜಿಲ್ಲೆಗಳ ಜವಾಬ್ಧಾರಿಯನ್ನು ತೆಗೆದುಕೂಳ್ಳುವುದು.
  1.ಬೆಂಗಳೂರು ಗ್ರಾಮಾಂತರ
  2.ಬೆಂಗಳೂರು ನಗರ
  3.ಚಿಕ್ಕಬಳ್ಳಾಪುರ
- ಜನಾರೋಗ್ಯದ ಚಟುವಟಿಕೆಗಳು/ಮಾಹಿತಿಗಳು/ಹೊಸ ಸುದ್ದಿಗಳನ್ನು ತಲುಪಿಸುವ ಮಾಧ್ಯಮವಾಗಿ ರೂಪುಗೊಂಡಿರುವ ವಾರ್ತಾ ಪತ್ರ ದ ಪ್ರಕಟಣೆ ಹಾಗು ಪ್ರಸಾರಕ್ಕೆ ಗಮನ ಹರಿಸುವುದು.
  1.ಲೇಖನಗಳನ್ನು ಬರೆಯುವುದು
  2.ಲೇಖನಗಳನ್ನು ಸಂಗ್ರಹಿಸುವುದು
  3.ತಂಡದ ಜೊತೆ ಕುಳಿತು ಒಟ್ಟು ವಿನ್ಯಾಸವನ್ನು ರೂಪಿಸುವುದು
  4.ಮುದ್ರಣ ಮತ್ತು ಪ್ರಸಾರಕ್ಕೆ ನೆರವಾಗುವುದು.
- ಜನಾರೋಗ್ಯ ಆಂದೋಲನ ಕರ್ನಾಟಕದ ವಾರ್ಷಿಕ ಯೋಜನೆಯನ್ನು ತಯಾರಿಸುವುದು. (ರಾಜ್ಯ ಕೋರ್ ಟೀಮ್ ಜೊತೆ ಸೇರಿ)
- ಮಾರ್ಚ್ 31 ರಂದು ಬೆಂಗಳೂರಿನಲ್ಲಿ ಜರುಗಿದ ಜನಸಂವಾದ ಕಾರ್ಯಕ್ರಮದ ತೀರ್ಮಾನಗಳನ್ನು ಆದಷ್ಟು ಮಟ್ಟಿಗೆ ಅನುಷ್ಠಾನಗೊಳಿಸಲು ಅನುಸರಣಾ ಕ್ರಮಗಳನ್ನು ಕೈಗೊಳ್ಳುವುದು.

  1. ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡುವುದು ಮತ್ತು ನಿಯೋಗದ ಭೇಟಿಗೆ ಸಮಯ ನಿಗದಿಪಡಿಸುವುದು.
  2. ಸರ್ಕಾರಕ್ಕೆ ಮಾರ್ಚ್ 31 ರಂದು ಸಲ್ಲಿಸಿರುವ ಮನವಿಪತ್ರದ ಅನುಸರಣೆ ಮಾಡುವುದು.
  3. ಆರೋಗ್ಯ ಆಯುಕ್ತರನ್ನು ಸಂಪರ್ಕಿಸಿ ಜನಾರೋಗ್ಯದ ಬೇಡಿಕೆಗಳ ಕುರಿತು ಕೈಗೊಂಡ ಕ್ರಮಗಳ ಕುರಿತು ಅನುಸರಣೆ ಮಾಡುವುದು.
  4. ಮೆಡಿಕೊ ಲೀಗಲ್ ಸೆಲ್ ಸ್ಥಾಪಿಸುವ ಕುರಿತಾಗಿ ರಾಜ್ಯ ಮಟ್ಟದ ಜನಸಂವಾದದಲ್ಲಿ ಆಶ್ವಾಸನೆ ನೀಡಿದ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರನ್ನು ಭೇಟಿ ಮಾಡಿ ಸೆಲ್ ಕುರಿತಾಗಿ ಚರ್ಚಿಸಲು ಸಭೆ ನಿಗದಿಮಾಡುವುದು.
  5. ಆರೋಗ್ಯ ನಿರಾಕರಣೆಗೆ ಒಳಗಾದ ಪ್ರಕರಣಗಳ ಕುರಿತು ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಾಲೋಚಿಸುವುದು.
- ರಾಜ್ಯ ಮಟ್ಟದ ಜನಸಂವಾದದ ಮುಂದುವರೆದ ಭಾಗವಾಗಿ ಜಿಲ್ಲಾ ಮಟ್ಟದ ಜನಸಂವಾದಗಳನ್ನು ಸಂಘಟಿಸುವುದು.
- ಜಿಲ್ಲಾ ಮಟ್ಟದ ಜನಸಂವಾದಕ್ಕೆ ಕೆಳಕಂಡ ಜಿಲ್ಲೆಗಳಲ್ಲಿ ಅಗತ್ಯ ಸಿದ್ಧತೆ ನಡೆಸುವುದು.
  1. ಬೆಂಗಳೂರು ನಗರ

2. ಬೆಂಗಳೂರು ಗ್ರಾಮಾಂತರ
3. ಬೀದರ್
4. ಚಿಕ್ಕಬಳ್ಳಾಪುರ

**ಅಗತ್ಯ ಪೂರಕ ತಯಾರಿ**

1. ಜಿಲ್ಲಾ ಮಟ್ಟದ ಕಾರ್ಯಕರ್ತರನ್ನು ಸಂಪರ್ಕಿಸುವುದು.
2. ಜಿಲ್ಲಾ ಮಟ್ಟದ ಸಭೆಗಳನ್ನು ಏರ್ಪಡಿಸಿ ಈ ಕುರಿತು ಚರ್ಚೆ ನಡೆಸಿ ಜನಸಂವಾದದ ನಿರ್ದಿಷ್ಟ ರೂಪು-ರೇಷೆಗಳನ್ನು ಸಿದ್ಧಪಡಿಸುವುದು.
3. ಆರೋಗ್ಯ ನಿರಾಕರಣೆಯ ಪ್ರಕರಣಗಳ ದಾಖಲಾತಿ ಮಾಡುವುದು.
4. ಜಿಲ್ಲೆಗೆ ಕನಿಷ್ಠ 3 ಪಿ.ಹೆಚ್.ಸಿ ಗಳನ್ನು ಆಯ್ಕೆ ಮಾಡಿ ಆರೋಗ್ಯ ಸೇವೆಗಳ ಗುಣಮಟ್ಟ ಇತರೆ ಸೇವೆಗಳ ಕುರಿತಾಗಿ ಸಮೀಕ್ಷೆ ನಡೆಸುವುದು.
5. ಜಿಲ್ಲಾ ಮಟ್ಟದಲ್ಲಿ ಆರೋಗ್ಯಕ್ಕಾಗಿ ಕೆಲಸ ಮಾಡುವ ಸಂಘ-ಸಂಸ್ಥೆಗಳನ್ನು ಈ ಮೂಲಕ ವ್ಯಾಪಕವಾಗಿ ಸಂಪರ್ಕಿಸಲು/ತೊಡಗಿಸಲು ಪ್ರಯತ್ನಿಸುವುದು.

- ಜನಾರೋಗ್ಯ ಆಂದೋಲನದ ಚಟುವಟಿಕೆಗಳನ್ನು ವಿಸ್ತರಿಸಲು ಕೆಳಕಂಡ ಜಿಲ್ಲೆಗಳಲ್ಲಿ ಸಭೆ/ಕಾರ್ಯಾಗಾರಗಳನ್ನು ಸಂಘಟಿಸುವುದು

1. ಬೆಂಗಳೂರು ನಗರ
2. ಬೆಂಗಳೂರು ಗ್ರಾಮಾಂತರ
3. ಚಿಕ್ಕಬಳ್ಳಾಪುರ
4. ರಾಮನಗರ
5. ಬೀದರ್

## 2. ಮಹಿಳೆಯರ ಆರೋಗ್ಯದ ಹಕ್ಕಿಗಾಗಿ ಕೆಲಸ ಮಾಡುವುದು :

- ಮಹಿಳೆಯರ ಮೇಲಾಗುವ ದೌರ್ಜನ್ಯ ಪ್ರಕರಣಗಳ ಕುರಿತಾದ ಅಧ್ಯಯನ ವರದಿಗಳನ್ನು ಸಂಗ್ರಹಿಸುವುದು ಮತ್ತು ಅಭ್ಯಾಸ ಮಾಡುವುದು.
- ಮಹಿಳೆಯರಲ್ಲಿ ಹೆಚ್ಚುತ್ತಿರುವ ಖಿನ್ನತೆ, ಉದ್ವೇಗ, ಆತ್ಮಹತ್ಯೆ ಮನೋಭಾವ,ಕೀಳರಿಮೆ ಮುಂತಾದ ಮಾನಸಿಕ ಒತ್ತಡಗಳ ಕುರಿತು ಮಾಹಿತಿ ಪಡೆಯುವುದು/ಲಭ್ಯವಿರುವ ಅಧ್ಯಯನ ವರದಿಗಳನ್ನು ಪಡೆದು ಅಭ್ಯಾಸ ಮಾಡುವುದು
- ಕೌಟುಂಬಿಕ ಹಾಗು ಸಾಮಾಜಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಅಗತ್ಯವಿರುವ ವೈದ್ಯಕೀಯ, ಕಾನೂನು ನೆರವನ್ನು ದೊರಕಿಸಿಕೊಡಲು ಪ್ರಯತ್ನಿಸುವುದು.

## 3. ದಲಿತ ಹಾಗು ದುರ್ಬಲ ಸಮುದಾಯದ ಆರೋಗ್ಯ ಸುಧಾರಣೆಯ ಚಟುವಟಿಕೆಗಳಿಗೆ ಕೈ ಜೋಡಿಸುವುದು.

- ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಹಾಗು ದುರ್ಬಲ ವರ್ಗದ ಜನಸಮುದಾಯಗಳು ವಾಸ ಮಾಡುವ ಪ್ರದೇಶಗಳಲ್ಲಿ ಆರೋಗ್ಯದ ವಿಷಯಗಳ ಕುರಿತಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸುವುದು ಹಾಗು ಆ ಜಾಗಗಳಲ್ಲಿ ಸಂಘಟನೆಯನ್ನು ಕಟ್ಟುವುದು ಬಲಪಡಿಸುವುದು.
- ದುರ್ಬಲ ವರ್ಗದ ಸಮುದಾಯಗಳ ನಡುವೆ ಆರೋಗ್ಯದ ನಿರ್ಧಾರಕ ಅಂಶಗಳ ಕುರಿತು ಸಮಗ್ರ ಆರೋಗ್ಯ ಕಲ್ಪನೆಯ ಕುರಿತು ಜಾಗೃತಿ ಮೂಡಿಸುವುದು.
- ದುರ್ಬಲ ಸಮುದಾಯಗಳು ದೌರ್ಜನ್ಯಕ್ಕೊಳಗಾದ ಪಕ್ಷದಲ್ಲಿ ಅವರ ಹಕ್ಕುಗಳು ಮತ್ತು ಅಗತ್ಯ ಅವಕಾಶಗಳಿಗಾಗಿ ಅವರೊಂದಿಗೆ ಸೇರಿ ಹೋರಾಡುವುದು.

| | | | | |
|---|---|---|---|---|
| | | | ಆರ್ಥಿಕ ಕಾರ್ಯಕ್ರಮಗಳು, ಒಟ್ಟಾರೆ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ರಂಗಗಳ ಮೇಲೆ ಜಾಗತೀಕರಣದ ಪರಿಣಾಮ ಅಥವಾ ದಾಳಿಯ ವಿಶ್ಲೇಷಣೆ. | |
| 8 | 19.05.2009 | ವಾರ್ತಾ ಪತ್ರದ ಕೆಲಸ | ಜನಾರೋಗ್ಯ ಆಂದೋಲನ ಕರ್ನಾಟಕ ಪ್ರಕಟಿಸುತ್ತಿರುವ ವಾರ್ತಾ ಪತ್ರದ ಪೂರ್ವ ಸಿದ್ಧತೆಯ ಕೆಲಸ | ವಾರ್ತಾ ಪತ್ರ ಸಿದ್ಧಪಡಿಸುವ ಕಛೇರಿಯ ಸಿಬ್ಬಂಧಿಯೊಂದಿಗೆ ಚರ್ಚೆ, ಜನಪರ ಸಂಘಟನೆಯ ಮುಖಂಡರಿಗೆ ಲೇಖನ ನೀಡಲು ಮನವಿ |
| 9 | 20.05.2010 | ಲಿಂಗ ಮತ್ತು ಆರೋಗ್ಯ | ಮಹಿಳೆಯರನ್ನು ಆವರಿಸಿರುವ ತಾರತಮ್ಯ ಧೋರಣೆಗಳು, ಆಸ್ತಿ ಹಕ್ಕು, ಜನನ ಸ್ವಾತಂತ್ರ್ಯ, ಶೈಕ್ಷಣಿಕ ಔದ್ಯೋಗಿಕ ಅವಕಾಶಗಳಲ್ಲಿ ವಂಚನೆ, ಕೌಟಂಬಿಕ ಸಾಮಾಜಿಕ ಒತ್ತಡಗಳು, ಕೆಲಸದ ಹೊರೆ, ಮಾನಸಿಕ ಮತ್ತು ಶಾರೀರಿಕ ದೌರ್ಜನ್ಯಗಳು, ಸಾಮಾಜಿಕವಾಗಿಯು ರಾಜಕೀಯವಾಗಿಯು ಇಲ್ಲವಾಗಿರುವ ಪ್ರಾಧನ್ಯತೆ, ಆರ್ಥಿಕ ಸ್ವಾತಂತ್ರ್ಯದ ಕೊರತೆ, ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುವ ಆರೋಗ್ಯ ಸಮಸ್ಯೆಗಳು, ಹೆಚ್.ಐ.ವಿ ಭಾದಿತ ಮಹಿಳೆಯರ ಸಂಕಷ್ಟಗಳು , ಸರ್ಕಾರದ ನೀತಿ ನಿರೂಪಣೆಗಳಲ್ಲು ಎದ್ದು ಕಾಣುವ ತಾರತಮ್ಯ ಧೋರಣೆಗಳು ಇತ್ಯಾದಿ. | ಆಟ,ಚರ್ಚೆ, ಅನುಭವ ಹಂಚಿಕೆ ಮತ್ತು ಸಂವಾದ |
| 10 | 23.05.2009 | ಸುವರ್ಣ ಚಾನಲ್‌ನ ಕಾರ್ಯಕ್ರಮ ಸಂಯೋಜಕರೊಂದಿಗೆ ಚರ್ಚೆ | ಸುವರ್ಣ ಚಾನಲ್ ಪ್ರಾರಂಭ ಮಾಡುತ್ತಿರುವ ಕತೆಯಲ್ಲಾ ಬದುಕು ವಿಶೇಷ ಕಾರ್ಯಕ್ರಮದ ಸಲುವಾಗಿ ಮಾಹಿತಿ ಮತ್ತು ಸಲಹೆ, ಅಭಿಪ್ರಾಯಗಳನ್ನು ಪಡೆಯಲು ಆ ಕಾರ್ಯಕ್ರಮದ ಸಂಯೋಜಕರು ಚರ್ಚೆಗೆ ಆಹ್ವಾನಿಸಿದರು. ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರಲಾಯಿತು. | ಸಭೆಯ ಮೂಲಕ |
| 11 | 18.05.2009 | ಚಿಕೂನ್‌ಗುನ್ಯಾ ಪೀಡಿತ ಪ್ರದೇಶಗಳಿಗೆ ಭೇಟಿ | ಕಾಡುಗೂಂಡನಹಳ್ಳಿ ಹಾಗೂ ದೇವರಜೀವನ ಹಳ್ಳಿ ಪ್ರದೇಶಗಳಲ್ಲಿ ಚಿಕೂನ್ ಗುನ್ಯ ರೋಗವು ವ್ಯಾಪಕವಾಗಿ ಹರಡಿ ಅಲ್ಲಿನ ಜನರು ತೀವ್ರ ತೊಂದರೆಗೆ ಸಿಲುಕಿದ್ದರು ಸಹ ಬಿ.ಬಿ.ಎಂ.ಪಿ ಕುಡಿಯುವ ನೀರಿನ ಪೂರೈಕೆಯಲ್ಲಿ , ಕಸವಿಲೇವಾರಿಯಲ್ಲಿ, ರೋಗ ನಿಯಂತ್ರಣ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ದಿವ್ಯ ನಿರ್ಲಕ್ಷ್ಯ ಮಾಡಿದ ಕುರಿತು ಸ್ಥಳೀಯರಿಂದ ದೂರು ಬಂದ ಹಿನ್ನಲೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ನಿಯೋಗದೊಂದಿಗೆ ಆ ಪದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯ ಅವಲೋಕನ ಮಾಡಲಾಯಿತು. | ಆರೋಗ್ಯ ಕೇಂದ್ರಗಳಿಗೆ ಆಸ್ಪತ್ರೆಗಳಿಗೆ ಭೇಟಿ, ಜನನಿಬಿಡ ಪ್ರದೇಶಗಳಿಗೆ ಭೇಟಿ, ರೋಗ ಪೀಡಿತರೊಂದಿಗೆ ಸಾರ್ವಜನಿಕರೊಂದಿಗೆ ಮಾತುಕತೆ, ವೈದ್ಯಾಧಿಕಾರಿಗಳೊಂದಿಗೆ ಸಮಾಲೋಚನೆ. |
| 12 | 26.05.2009 | ವಾರ್ತ ಪತ್ರದ ಕೆಲಸ, ಬಿ.ಬಿ.ಎಂ.ಪಿ ಗೆ ಮನವಿ ಪತ್ರ | ವಾರ್ತಾ ಪತ್ರಕ್ಕೆ ಲೇಖನ ಸಿದ್ದಪಡಸಲಾಯಿತು ಮತ್ತು ಉಳಿದವರಿಂದ ಮಾಹಿತಿ ಸಂಗ್ರಹಿಸಲು ಅನುಸರಣೆ ಮಾಡಲಾಯಿತು. | ಕಛೇರಿಯಲ್ಲಿ ಜನಾರೋಗ್ಯ ಆಂದೋಲನ ಗೆಳೆಯರೊಂದಿಗೆ ನಂತರ ಚಿಕನ್‌ಗುನ್ಯ ಬಾದಿತ ಪ್ರದೇಶಗಳಿಗೆ ಅಗತ್ಯ ಕ್ರಮ ತೆಗೆದು ಕೊಳ್ಳಲು ಕೋರಿ ಬಿ.ಬಿ.ಎಂ.ಪಿ ಯ ಆರೋಗ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು. |

# ಕೆಲಸದ ಮಾನಸಿಕ ವರದಿ

ಜುಲೈ 2009 ಪ್ರಭಾ.ಎನ್

ಜನಾರೋಗ್ಯ ಆಂದೋಲನ – ಕರ್ನಾಟಕ

| ಕ್ರಮ ಸಂಖ್ಯೆ | ದಿನಾಂಕ | ಭೇಟಿ ನೀಡಿದ ಸ್ಥಳ | ಭೇಟಿಯ ಉದ್ದೇಶ | ಫಲಿತಾಂಶ |
|---|---|---|---|---|
| 1 | 01.07.2009 | ಸಿ.ಹೆಚ್.ಸಿ ವಿಕಾಸ ಸೌಧ ಹೈಕೋರ್ಟ | ಜನಾರೋಗ್ಯ ಆಮದೋಲನದ ಕೆಲಸ ನಿಮಿತ್ತ | ಆರೋಗ್ಯ ಕಾರ್ಯದರ್ಶಿಗಳು ಮತ್ತು ಜಸ್ಟೀಸ್ ಗೋಪಾಲಗೌಡರ ಭೇಟಿಗೆ ಸಮಯಾವಕಾಶ ಕೋರಿ ಪತ್ರ ನೀಡಲಾಯಿತು. ಮಾರನೆ ದಿವಸವೇ ಭೇಟಿಯಾಗುವಂತೆ ಆರೋಗ್ಯ ಕಾರ್ಯದರ್ಶಿಗಳ ಕಛೇರಿಯಲ್ಲಿ ತಿಳಿಸಿದರು. |
| 2 | 02.07.2009 | ಸಿ.ಹಚ್.ಸಿ ವಿಕಾಸ ಸೌಧ | ಜನಾರೋಗ್ಯ ಕೆಲಸದ ನಿಮಿತ್ತ | ಆರೋಗ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಮಾರ್ಚ 31 ರಂದು ರಾಜ್ಯ ಮಟ್ಟದ ಜನಸಂವಾದದಲ್ಲಿ ಸಲ್ಲಿಸಲಾಗಿದ್ದ ಮನವಿ ಪತ್ರದ ಬಗ್ಗೆ ಅವರ ಗಮನ ಸೆಳೆಯಲಾಯಿತು. ಅವರಿಂದ ನೀರಾಸ ಪ್ರತಿಕ್ರಿಯೆ ವ್ಯಕ್ತವಾಯಿತು. ಆದರೆ ಮತ್ತೊಮ್ಮೆ ಸಮಯ ನೀಡುವುದಾಗಿ ತಿಳಿಸಿದರು. |
| 3 | 03.07.2009 | ಸಿ.ಹೆಚ್.ಸಿ | ಕಚೇರಿಯ ಕೆಲಸ | ರಾಯಚೂರಿನ ಸತ್ಯ ಶೋಧನಾ ವರದಿ ತಯಾರಿಕೆ |
| 4 | 06.07.2009 | ಸಿ.ಹೆಚ್ಸಿ | ಕಚೇರಿಯ ಕಲಸ | ರಾಯಚೂರಿನ ಸತ್ಯ ಶೋಧನಾ ವರದಿ ತಯಾರಿಕೆ |
| 5 | 07.07.2009 | ಸಿ.ಹೆಚ್.ಸಿ | ಕಚೇರಿಯ ಕಲಸಗಳು | ಜನಾರೋಗ್ಯದ ವಾರ್ತಾಪತ್ರದ ಸಿದ್ಧತೆ ನಡೆಸಲಾಯಿತು ಮತ್ತು ಸತ್ಯಶೋಧನಾ ವರದಿಯನ್ನು ಟೈಪ್ ಮಾಡಲಾಯಿತು. |
| 6 | 08.07.2009 | ಕೆ.ಆರ್.ಪುರಂ ಆನಂದ ರಾವ್ ವೃತ್ತ | ಆಸ್ಪತ್ರೆಗಯ ಅವ್ಯವಹಾರಗಳ ದೂರುಗಳನ್ನು ದಾಖಲಿಸುವುದು | ಕೆ.ಆರ್.ಪುರಂನ ಸಾರ್ವಜನಿಕ ಆಸ್ಪತ್ರೆಯ ಅವ್ಯವಹಾರದ ಕುರಿತು ತನಿಖೆ ನಡೆಸಲು ಬಂದಿದ್ದ ತಂಡಕ್ಕೆ ಮಹಿಳೆಯರು ನೀಡಿದ್ದ ಹೆಳಿಕೆಗಳ ಕುರಿತು ಪರಿಶೀಲನೆ ನಡೆಸಲಾಯಿತು. ಅವರು ಬದಲಿ ಹೇಳಿಕೆಗಳನ್ನು ಕುರಿತು ಅವರೊಂದಿಗೆ ಪರಿಶೀಲನೆ ನಡೆಸಲಾಯಿತು. ಅವರು ಬದಲಿ ಹೇಳಿಕೆಗಳನ್ನು ನೀಡಿದ್ದನ್ನು ಗಮನಿಸಿ ಸಮ್ಮದೇ ಹೇಳಕೆಗಳನ್ನು ನೀಡಲು ದಾಖಲೆಗಳ ಸಮೇತ ಆನಂದ್‌ರಾವ್ ವೃತದಲ್ಲಿರುವ ವಿಜಿಲೆನ್ಸ್ ಅಧಿಕಾರಿಗಳನ್ನು ಭೇಟಿ ಮಾಡಿ ಅವುಗಳನ್ನು ಸಲ್ಲಿಸಲಾಯಿತು. |
| 7 | 09.07.2009 | ಕನಸವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ | ದೂರುಗಳಿದ್ದ ಹಿನ್ನಲೆಯಲ್ಲಿ | ದೊಡ್ಡಬಳ್ಳಾಪುರದ ತಾಲ್ಲೂಕಿನ ಕನಸವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳೀಯ ಗ್ರಾಮ ಪಂಚಾಯತಿ ಮತ್ತು ಜೆ.ಎ.ಎ.ಕೆ ಕಾರ್ಯಕರ್ತರೊಂದಿಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಯೊಂದಿಗೆ ಸಮಾಲೋಚನೆ ನಡೆಸಿ ಅಗತ್ಯವಿದ್ದ ಮಾಹಿತಿಗಳನ್ನು, ದಾಖಲೆಗಳನ್ನು ಪಡೆಯಲಾಯಿತು. |
| 8 | 10.07.2009 | ಸಿ.ಹೆಚ್.ಸಿ | ಜನಾರೋಗ್ಯದ ವಾರ್ತಾಪತ್ರದ ಸಿದ್ಧತೆ | ಜನಾರೋಗ್ಯ ಆಂದೋಲನ–ಕರ್ನಾಟಕದ ವಾರ್ತಾಪತ್ರದ ಸತ್ಯಶೋಧನಾ ವರದಿಯನ್ನು ಟೈಪ್ ಮಾಡಲಾಯಿತು. |
| 9 | 13.07.2009 | ಜನಾರೋಗ್ಯ ಕಚೇರಿ *ಆರೋಗ್ಯ ಮತ್ತು ಕುಟುಂಬ ಕಲ್ಯಾಣ* | ಕಚೇರಿಯ ಕೆಲಸಗಳ ಅನುಪಾಲನೆ. ಆನಂದರಾವ್ ವೃತದಲ್ಲಿರುವ ಆರೋಗ್ಯ ಜಾಗೃತ ದಳದ ಅಧಿಕಾರಿಗಳ ಭೇಟಿ | ರಾಯಚೂರಿನ ಸತ್ಯ ಶೋಧನಾ ವರದಿಯನ್ನು ಮರುಪರಿಶೀಲಿಸಲಾಯಿತು. ಅಗತ್ಯವಿದ್ದ ಸಾಕಷ್ಟು ತಿದ್ದುಪಡಿಗಳನ್ನು ಮಾಡಲಾಯಿತು. ಆರೋಗ್ಯ ಇಲಾಖೆಯ ಜಾಗೃತ ದಳಕ್ಕೆ ಭೇಟಿ ನೀಡಿ ಕೆ.ಆರ್.ಪುರಂ ನ ಆಸ್ಪತ್ರೆಯ ವೈದ್ಯರ ಮೇಲಿನ ಭ್ರಷ್ಟಾಚಾರದ ಕುರಿತು ಹೇಳಿಕೆ ನೀಡಲಾಯಿತು. |

| | | | | |
|---|---|---|---|---|
| | | ನಿರ್ದೇಶನಾಲಯದ ಕಚೇರಿ | | |
| 10 | 14.07.2009 | ಜನಾರೋಗ್ಯ ಕೆಲಸ | ಕೋರ್ ಸಮಿತಿ ಸದಸ್ಯರ ಸಭೆ | ಓಬಳೇಶ್ ರವರು ತರಬೇತಿ ಪಡೆಯುವ ಹಿನ್ನಲೆಯಲ್ಲಿ ದೆಹಲಿಗೆ ತೆರಳಲಿದ್ದು ಜನಾರೋಗ್ಯದ ಕೆಲಸಗಳನ್ನು ಪಟ್ಟಿ ಮಾಡಿ ಅವರೊಂದಿಗೆ ಚರ್ಚೆ ನಡೆಸಲಾಯಿತು. ಅನುಸರಣೆ ಕುರಿತು ಸ್ಪಷ್ಟತೆಗೆ ಬರಲಾಯಿತು. |
| 11 | 15.07.2009 | ದೇವನಹಳ್ಳಿ ಕೆ.ಹೆಚ್.ಎಸ್.ಆರ್.ಡಿ.ಪಿ ಕೆ.ಆರ್ ವೃತ್ತ | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜನಾರೋಗ್ಯ ಆಂದೋಲನದ ವತಿಯಿಂದ ಜನಸಂವಾದ ಸಂಘಟಿಸಲು ಪೂರ್ವಸಿದ್ಧತೆ ನಿಮಿತ್ತ | ದೇವನಹಳ್ಳಿಯಲ್ಲಿ ಸಂಪರ್ಕವಿರುವ ಮಹಿಳಾ ಸಂಘಟನೆಯ ಮುಖಂಡರನ್ನು ಮತ್ತು ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳನ್ನು ಭೇಟಿಯಾಗಿ ರಾಜ್ಯ ಸಮಿತಿಯ ತೀರ್ಮಾನಗಳ ಬಗ್ಗೆ ತಿಳಿಸಲಾಯಿತು. ಸ್ಥಳೀಯ ಆರೋಗ್ಯ ವಿಷಯಗಳನ್ನು ಅವರೊಂದಿಗೆ ಚರ್ಚಿಸಲಾಯಿತು. ಆರೋಗ್ಯ ವ್ಯವಸ್ಥೆಯಲ್ಲಿನ ಲೋಪಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ನೆರವಾಗಬಲ್ಲ ಜನಸಂವಾದವನ್ನು ಸಂಘಟಿಸಬಲ್ಲಾ ಎಲ್ಲರ ಸಹಕಾರ ಮತ್ತು ಪಾಲುದಾರಿಕೆಯನ್ನು ತಿಳಿಸಿಕೊಡಲಾಯಿತು. ಸ್ಥಳೀಯ ಸಂಘ-ಸಂಸ್ಥೆಗಳನ್ನು ಪಾಲ್ಗೊಳಿಸಿಕೊಂಡು ವಿಸ್ತೃತವಾಗಿ ಚರ್ಚಿಸಿ ತೀರ್ಮಾನಿಸಲು ಮತ್ತೊಂದು ಸಭೆ ಕರೆಯಲಾಯಿತು. ಜವಬ್ದಾರಿ ಹಂಚಿಕೆಯಾಯಿತು. ಕೆ.ಹೆಚ್.ಎಸ್.ಆರ್.ಡಿ.ಪಿ ಯಲ್ಲಿ ಅವರ ಯೋಜನಾ ನಿರ್ದೇಶಕರಾದ ವಂದಿತಾ ಶರ್ಮಾರವರನ್ನು ಭೇಟಿ ಮಾಡಿ ಅವರೊಂದಿಗೆ ಸಭೆ ನಡೆಸಲು ಸಮಯವಕಾಶ ಕೋರಲಾಯಿತು. ಅದಕ್ಕೆ ಅನುಮತಿಸಿದ ಅವರು ಮುಂದಿನ ವಾರ ಸಭೆ ಕರೆಯೋಣ ಎಂದು ತಿಳಿಸಿರುತ್ತಾರೆ. |
| 12 | 16.07.2009 | ಜನಾರೋಗ್ಯ ಆಂದೋಲನ ಕಚೇರಿ | ರಾಯಚೂರು ಸತ್ಯಶೋಧನಾ ವರದಿ ಪ್ರಯುಕ್ತ | ಸತ್ಯ ಶೋಧನಾ ವರದಿಗ ಸಾಕಷ್ಟು ಮಾರ್ಪಡುಗಳನ್ನು ಮಾಡಲಾಯಿತು. ಬಿಟ್ಟು ಹೋಗಿದ್ದ ಅಂಶಗಳನ್ನು ಸೇರಿಸಲಾಯಿತು. ಅಧಿಕಾರಿಗಳಿಗೆ ನೀಡುವ ಸಲುವಾಗಿ ಪತ್ರ ಬರೆಯಲಾಯಿತು. |
| 13 | 17.07.2009 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಆನಂದರಾವ್ ವೃತ್ತ ಜನಾರೋಗ್ಯ ಆಂದೋಲನ ಕೆಲಸ | ಜಾಗೃತ ದಳದ ಅಧಿಕಾರಿಗಳನ್ನು ಭೇಟಿಯಾಗುವ ನಿಮತ್ತ ಕಚೇರಿ ಕೆಲಸಗಳ ಸಲುವಾಗಿ | ಜಾಗೃತ ದಳದ ಅಧಿಕಾರಿಗಳನ್ನು ಭೇಟಿಯಾಗಿ ಬೆಂಗಳೂರು ಗ್ರಾಮಾಮತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಕನಸವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲಿನ ಸಾರ್ವಜನಿಕ ದೂರುಗಳ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಲಾಯಿತು. ಕಚೇರಿಯಲ್ಲಿ ಇ-ಮೇಲ್ ಪರಿಶೀಲಿಸಲಾಯಿತು. ರಾಯಚೂರಿನಲ್ಲಿ ಮಹಿಳೆಯರು ಸಾರ್ವತ್ರಿಕ ಪಡಿತರ ವ್ಯವಸ್ಥೆಗಾಗಿ ನಡೆಸುತ್ತಿರುವ ಸತ್ಯಾಗ್ರಹದ ಬಗ್ಗೆ ಅಭಯ್ ರವರು ಪ್ರಸ್ತಾಪ ಮಾಡಿ ಜನಾರೋಗ್ಯದ ಬೆಂಬಲ ಕೋರಿದ್ದರು. ಇದಕ್ಕೆ ಪ್ರತಿಕ್ರಯಿಸಿ ಅವರೊಂದಿಗೆ ಆಂದೋಲನ ನಿರ್ವಹಿಸಬಹುದಾದ ಜವಬ್ದಾರಿಯ ಬಗ್ಗೆ ಚರ್ಚಿಸಲಾಯಿತು.<br>ರಾಯಚೂರಿನ ಸತ್ಯಶೋಧನಾ ವರದಿಯನ್ನು ಹಾಗೂ ವಾರ್ತಾ ಪತ್ರದ ಪ್ರೂಫ್ ನೋಡಲಾಯಿತು. |
| 14 | 20.07.2009 | ಸಿ.ಹೆಚ್.ಸಿ ಹೈಕೋರ್ಟ | ಕಚೇರಿ ಕೆಲಸ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ನೀಡಲು | ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಸಿದ್ಧಪಡಿಸಲಾಯಿತು. ಆಹಾರದ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವ ರಾಯಚೂರು ಜಿಲ್ಲೆಯವರ ಮನವಿ ಪತ್ರವನ್ನು ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ ತಲುಪಿಸಲಾಯಿತು. |

| | | | | |
|---|---|---|---|---|
| | | | | (ಅಭಯ್ ರವರು ಇದಕ್ಕಾಗಿ ಇ-ಮೇಲ್ ಮೂಲಕ ನಮಗೆ ಮನವಿ ಮಡಿವರು). |
| 15 | 21.07.2009 | ಡಿ.ಜಿ.ಪಿ ಕಚೇರಿ ಸಿ.ಹೆಚ್.ಸಿ | ದಲಿತ ಯುವಕನೊಬ್ಬನ ಮೇಲೆ ಜರುಗಿದ ಆಸಿಡ್ ದಾಳಿಯ ಸಂಬಂಧ ಭೇಟಿಯಾಗಲು | ಆಸಿಡ್ ದಾಳಿಗೆ ತುತ್ತಾಗಿದ್ದ ಯುವಕನೊಬ್ಬನ ರಕ್ಷಣೆಯ ಸಲುವಾಗಿ ಪೋಲಿಸ್ ಅಧಿಕಾರಿಗಳನ್ನು ಭೇಟಿ ಮಾಡಿ ಕಾನೂನು ನೆರವನ್ನು ಕೋರಲಾಗಿತ್ತು. ನಂತರ ಕಚೇರಿ ಕೆಲಸ |
| 16 | 22.07.2009 | ಸಿ.ಹೆಚ್.ಸಿ ಕೆ.ಹೆಚ್.ಎಸ್ ಆರ್.ಡಿ.ಪಿ | ಕೆ.ಹೆಚ್.ಎಸ್.ಆರ್.ಡಿ.ಪಿ ಯ ಯೋಜನಾಧಿಕಾರಿಗಳು ಸಮುದಾಯ ಮೇಲ್ವಿಚಾರಣೆಯ ಕುರಿತಾಗಿ ಚರ್ಚಿಸಲು ಕರೆದಿದ್ದರು | ಆದರೆ ಆರೋಗ್ಯ ಕಾರ್ಯದರ್ಶಿಗಳಿಗೆ ತುರ್ತು ಕರೆಯ ಮೆರೆಗೆ ವಿಕಾಸಸೌಧಕ್ಕೆ ತೆರಳಿದರು. ಇನ್ನೊಂದು ದಿನ ಭೇಟಿಯಾಗುವುದಾಗಿ ತಿಳಿಸಿದರು. |
| 17 | 24.07.2009 | ಸಿ.ಹೆಚ್.ಸಿ | ಕಚೇರಿ ಕಲಸ | ರಾಧ ಜೊತೆಯಲ್ಲಿ ನಗರ ಮಟ್ಟದ ಜನಸಂವಾದ ಸಂಘಟಿಸುವ ಕುರಿತಾಗಿ ಚರ್ಚೆ ನಡೆಸಿ ಕೆಲವು ಯೋಜನೆಗಳನ್ನು ರೂಪಿಸಲಾಯಿತು.ಈ ಕುರಿತು ಫೋನ್ ಮೂಲಕ ಕೆಲ ಸಂಘಟನೆಗಳನ್ನು ಸಂರ್ಪಕಿಸಲಾಯಿತು |
| 18 | 27.07.2009 | ಸಿ.ಹೆಚ್.ಸಿ ಹೈಕೋರ್ಟ | ಕಚೇರಿ ಕೆಲಸ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ನೀಡಲಾಯಿತು | ಕಛೇರಿಯಲ್ಲಿ ರಾಧ ಮತ್ತು ಓಬಳೇಶ್ ಜೊತೆ ನಗರ ಜನಸಂವಾದ ಕುರಿತು ಕ್ರಿಯಯೋಜನೆ ರೂಪಿಸಲಾಯಿತು. ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಸಿದ್ಧಪಡಿಸಲಾಯಿತು. ಆಹಾರದ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವ ರಾಯಚೂರು ಜಿಲ್ಲೆಯವರ ಮನವಿ ಪತ್ರವನ್ನು ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಿಗೆ 2ನೇ ಬಾರಿಗೆ ತಲುಪಿಸಲಾಯಿತು. (ಅಭಯ್ ರವರು ಇದಕ್ಕಾಗಿ ಫೋನ್ ಮೂಲಕ ನಮಗೆ 2ನೇ ಬಾರಿ ಮನವಿ ಮಾಡಿದರು. |
| 19 | 28.07.2009 | ರೈತ ಸಂಘದ ಕಚೇರಿ ಸಿ.ಹೆಚ್.ಸಿ | ರಾಯಚೂರಿನ ದಲಿತರ ಮೇಲಾದ ದೌರ್ಜನ್ಯಕ್ಕೆ ಸಂಬಂಧಿಸಿ | ರಾಯಚೂರಿನ ದಲಿತರ ಮೇಲಾದ ದೌರ್ಜನ್ಯ ಪ್ರಕರಣಕ್ಕೆ ಸಂಬಧಿಸಿದಂತೆ ಸತ್ಯ ಶೋಧನಾ ತಂಡಕ್ಕೆ ಅಗತ್ಯವಿದ್ದ ದಾಖಲೆಗಳನ್ನು ಅವರಿಂದ ಸಂಗ್ರಹಿಸಲಾಯಿತು |
| 20 | 29.07.2009 | ಸಿ.ಹೆಚ್.ಸಿ ಕಾರ್ಪೊ ರೇಶನ್ ಕಚೇರಿ | ಜನಾರೋಗ್ಯ ಸಭೆಯ ಪತ್ರ ತಲುಪಿಸಲು | ಕಚೇರಿಯಲ್ಲಿ ಸಭೆಗೆ ಆಹ್ವಾನ ಪತ್ರವನ್ನು ತಯಾರಿಸಲಾಯಿತು. ಆಹ್ವಾನ ಪತ್ರಗಳನ್ನು ಸಮಾನತ ಮಹಿಳಾ ವೇದಿಕೆ ಮುಂತಾದ ಸಂಸ್ಥೆಗಳಿಗೆ ತಲುಪಿಸಲಾಯಿತು. |

Community Health Learning Programme is the second phase of the Community Health Fellowship Scheme and is supported by the Sir Ratan Tata Trust, Mumbai

COMMUNITY HEALTH CELL (FUNCTIONAL UNIT OF SOCHARA)
85/2, 1ST MAIN, MARUTHI NAGARA, MADIWALA,
BENGALURU - 560068
TEL: +91-80-25531518/25525372 EMAIL: CHINTERNSHIP@SOCHARA.ORG
WEBSITE: WWW.SOCHARA.ORG